ನಾನೂ ಚಂದಿರನನ್ನು ನೋಡುತ್ತೇನೆ, ಅದೇನು ಅಪವಾದ ಬರುವುದೆಂದು ನೋಡಿಯೇ ಬಿಡುತ್ತೇನೆ. ಪ್ರಭಾತ ನೀನೂ ಬಾ ಒಟ್ಟಿಗೆ ನೋಡೋಣ" ಎಂದು ಹಲ್ಕಿರಿದ.

"ನಾನು ಬರುವುದಿಲ್ಲ; ಅಂತಹ ಪರೀಕ್ಷೆಗಳನ್ನು ಮಾಡುವುದು ಕ್ಷೇಮವೂ ಅಲ್ಲ. ಅಪೂರ್ವ ಮೊದಲಿನಂತಾದರೆ ಸಾಕು. ಅವನಿಗೆ ಆ ಹಾಡನ್ನು ಹುಡುಕಿಕೊಡುವ ಪ್ರಯತ್ನ ಮಾಡೋಣ" ಎಂದುದಕ್ಕೆ ಸೂರ್ಯಾಂಶ ಅರೆಮನಸ್ಸಿನಿಂದ ಒಪ್ಪಿದ.

"ಆ ಉಪಕಾರವನ್ನಾದರೂ ಮಾಡಿ, ಎಲ್ಲಿ ಸಿಕ್ಕಿದರೂ ಕಳುಹಿಸಿಕೊಡಿ" ಎಂದು ಅಪೂರ್ವ ಕೈಮುಗಿದು ಬೇಡಿಕೊಂಡ.

★★★

ಇಲ್ಲ! ಎಲ್ಲಿ ಹುಡುಕಿದರೂ ಆ ಹಾಡು ಸಿಗಲೇ ಇಲ್ಲ. ಕಂಡಕಂಡ ಕ್ಯಾಸೆಟ್ ಅಂಗಡಿಗಳಲ್ಲಿ, ದೇವಸ್ಥಾನಗಳಲ್ಲಿ ಹುಡುಕಿದರೂ ಸಿಗಲಿಲ್ಲ. ಒಂದೆರಡು ದೇವಸ್ಥಾನಗಳಲ್ಲಿ ಕ್ಯಾಸೆಟ್ಟು ಇತ್ತಾದರೂ ಅದು ಹಾಳಾಗಿತ್ತು. ಸೂರ್ಯಾಂಶ ಆ ಪ್ರಯತ್ನಕ್ಕೆ ತಲೆಹಾಕಲೂ ಇಲ್ಲ. ಪ್ರಭಾತ ಮಾತ್ರ ತಿರುಗಿ ಬೆಂಗಳೂರಿಗೆ ಹೊದ ಮೊದಮೊದಲು ಪ್ರಯತ್ನ ಮಾಡಿದನಾದರೂ ಅನಂತರದಲ್ಲಿ ಮರೆತುಬಿಟ್ಟ. ಅಪೂರ್ವನಿಗೆ ಮಾತ್ರ ದಿನವಿಡೀ ಅದೇ ಕೆಲಸವಾಗಿತ್ತು. ಎಲ್ಲ ದೇವಾಲಯಗಳಿಗೂ ಫೋನ್ ಮಾಡಿ ವಿಚಾರಿಸುತ್ತಿದ್ದ. ಅದಾವುದೋ ದೇವಾಲಯದಲ್ಲಿ ಪ್ರತಿದಿನ ಬೆಳಿಗ್ಗೆ ಆ ಹಾಡನ್ನು ಹಾಕುತ್ತಾರೆಂದು ತಿಳಿದು ಅಲ್ಲಿಗೆ ಹೋದ. ಅಲ್ಲಿ ಹೋಗಿ ವಿಚಾರಿಸುತ್ತಿದ್ದಂತೆ ಅರ್ಚಕರು, "ಇಲ್ಲ ಆ ಸೀಡಿಯನ್ನು ಈಗಷ್ಟೇ ಯಾರೋ ಕೊಂಡು ಹೋದರು. ಅವರ ಮಗ ಚೌತಿಚಂದ್ರನನ್ನು ನೋಡಿದ್ದಾನಂತೆ, ಆ ಹಾಡು ಕೇಳಿಸಲು ಹಣಕೊಟ್ಟು ತೆಗೆದುಕೊಂಡು ಹೋದರು" ಎಂದಾಗ ಇನ್ನೂ ಗಾಬರಿಗೊಳಗಾದ. ಎಲ್ಲೆಲ್ಲೋ ಸುತ್ತಿ ಇನ್ನೊಂದೆಡೆ ಆ ಹಾಡಿರುವ ಸೀಡಿ ಸಿಕ್ಕಿಯೇ ಬಿಟ್ಟಿತು. ಮನೆಗೆ ಬಂದವನೇ ಸೀಡಿ ಹಾಕಿದ. ಆದರೆ ಆ ಸೀಡಿ ಈ ಹಾಡುಬರುವಾಗಲೇ ನಿಂತು ಬಿಡುತ್ತಿತ್ತು. ಎಷ್ಟೇ ಪ್ರಯತ್ನಿಸಿದರೂ ಸರಿಯಾಗದೇ ಇದ್ದಾಗ ಮಾತ್ರ ಅಪೂರ್ವ ಸುಬ್ಬು ಹೇಳಿದಂತೆ ನನಗೆ ಅಪವಾದ ಕಟ್ಟಿಟ್ಟಬುತ್ತಿ ಎಂದು ಇನ್ನೂ ತಳಮಳಕ್ಕೆ ಒಳಗಾದ.

★★★

ತದನಂತರದಲ್ಲಿ ಯುಗಾದಿಯ ತನಕ ಅವನು ಮನೆಯ ಹೊರಗೆ ಹೋಗುವುದನ್ನೇ ನಿಲ್ಲಿಸಬೇಕೆಂದು ನಿರ್ಧರಿಸಿದ. ಆದರೆ ಹತ್ತಿರದ ಹಾಲುಡೈರಿಯಿಂದ ದಿನಾ ಬೆಳಗ್ಗೆ ಇವನೇ ಹಾಲು ತರಬೇಕಾಗಿತ್ತು. ಅಲ್ಲಿ ಯಾವುದೇ ಅಪಾಯ ಬಾಧಿಸದೆಂಬ ಧೈರ್ಯದಿಂದ ಅದೊಂದು ಕೆಲಸಕ್ಕೆ ಮನೆಯಿಂದ ಹೊರಕ್ಕೆ ಬರುತ್ತಿದ್ದ. ಆದರೆ ಅದೊಂದು ದಿನ ಈತ ಹಾಲು ತೆಗೆದುಕೊಳ್ಳುವಾಗ ಯಾರದೋ ಚಿಲ್ಲರೆ ದುಡ್ಡೊಂದು ಬಿದ್ದಿತು. ಬಿದ್ದ ಶಬ್ದ ಕೇಳಿತೇ ಹೊರತು ಎಷ್ಟು ಹುಡುಕಿದರೂ ಎಲ್ಲಿ ಬಿತ್ತೆಂದು ಕಾಣಲಿಲ್ಲ. ಮನೆಗೆ ಬಂದು ಹಾಲನ್ನು ಕ್ಯಾನಿನಿಂದ ಇನ್ನೊಂದು ಪಾತ್ರೆಗೆ ಸುರಿಯುತ್ತಿರುವಾಗ ಠಣ್ಣೆಂದು ಹೊರಬಿದ್ದ ಎರಡು ರೂಪಾಯಿಯ ಕಾಯಿನ್ ಅವನಲ್ಲಿ ಹೆದರಿಕೆ ಹುಟ್ಟಿಸಿತು. ತನ್ನ ಮೇಲೆ ಅಪವಾದ ಬಂದುಬಿಡಬಹುದೆಂಬ ಭಯದಿಂದ ಆ ತಕ್ಷಣವೇ ಹಾಲಿನ ಡೈರಿಗೆ ಹೋಗಿ ವಿಷಯ ತಿಳಿಸಿ ಅದನ್ನು ಕೊಟ್ಟುಬಂದ.

ಆತ ಕಾಯುತ್ತಿದ್ದ ಯುಗಾದಿ ಬಂದೇ ಬಿಟ್ಟಿತು. ಇವತ್ತು ತಪ್ಪದೇ ಚಂದ್ರನನ್ನು ನೋಡಬೇಕೆಂದುಕೊಳ್ಳುತ್ತ ಕತ್ತಲೆಯಾಗುವುದನ್ನೇ ಕಾಯುತ್ತ ಕುಳಿತ. ಸಂಜೆಯಾಗುತ್ತಿದ್ದಂತೆ ಮೋಡ ಕವಿದು ಬಿರುಗಾಳಿಯೊಂದಿಗೆ ಸಣ್ಣ ಮಳೆಸುರಿಯಿತು. ಮಳೆಯ ಛಾಯೆಯೇ ಇಲ್ಲದ ಎಪ್ರಿಲ್ ತಿಂಗಳಿನಲ್ಲಿ ಅಚಾನಕ್ಕಾಗಿ ಕಾರ್ಮೋಡ ಕಟ್ಟಿದ್ದು ಆಶ್ಚರ್ಯವೇ ಆದರೂ ಅದು